# ಆಧುನಿಕ ಕಾಲಜ್ಞಾನಿಗಳು

ಒಂದು ಮುಂಜಾನೆ ವಾಯು ವಿಹಾರದಲ್ಲಿದ್ದಾಗ ಪಾರ್ಕಿನೊಳಗಡೆ 80ರ ಅಂಚಿನ ವೃದ್ಧರೊಬ್ಬರು ಕುಳಿತು ಎರಡೂ ಕೈಗಳ ಬೆರಳುಗಳನ್ನು ಮಡಚಿ ತಮ್ಮ ಉಗುರುಗಳನ್ನು ಮಸೆಯುತ್ತಿದ್ದರು. ಆಶ್ಚರ್ಯದಿಂದ ಸ್ವಲ್ಪ ದಿಟ್ಟಿಸಿ ನೋಡಿದೆ. ಈ ಇಳಿ ವಯಸ್ಸಿನಲ್ಲಿ ಅದರಿಂದ ಇವರಿಗೆ ಆಗಲಿರುವ ಪ್ರಯೋಜನವಾದರೂ ಏನಿರಬಹುದೆಂದು ಯೋಚಿಸತೊಡಗಿದೆ.

ಕಾಲನು ಈಗ ವಿಜ್ಞಾನ ಮತ್ತು ಮಾಹಿತಿ ಎಂಬ ರೆಕ್ಕೆ ಹಚ್ಚಿದ ಉಚ್ಚೈಶ್ರವವನ್ನು ಏರಿ ಹೊರಟಿದ್ದಾನೆ. ದೇಶವು ತನ್ನ ಗಡಿಗೆರೆಗಳನ್ನು ಆಕಾಶದಿಂದತ್ತತ್ತ ವಿಸ್ತರಿಸಿಕೊಳ್ಳುತ್ತಿದೆ. ನಾಗರಿಕತೆಯು ವೇಗವಾಗಿ ಫಾರ್ವರ್ಡ್ ಆಗುತ್ತಿದೆಯೇನೋ ಎನ್ನಿಸುವಷ್ಟು ಬೆಳೆಯುತ್ತಿದೆ. ಖಾಸಗಿತನ ಇಲ್ಲವೆನಿಸುವಷ್ಟು ಬದುಕು ಬಟಾಬಯಲಾಗುತ್ತಿದೆ. ಮೊಬೈಲಿನಲ್ಲಿ ತೆಗೆದ ಯಾವುದೋ ಇಷ್ಟದ ಫೋಟೋ ಅದು ಹೇಗೋ ನಮ್ಮ ಕಂಪ್ಯೂಟರಿನೊಳಗೆ ನಮಗರಿವಿಲ್ಲದಂತೆ ತೂರಿ ಒಂದು ಮೂಲೆಸೇರಿ ಕುಳಿತಿರುತ್ತದೆ. ಫ್ರಿಜ್‌ನಲ್ಲಿ ತರಕಾರಿ ಖಾಲಿಯಾಗಿದೆಯೆಂದು ಅದೇ ತಂತಾನೆ ಮಾರಾಟ ಮಳಿಗೆಗೆ ಸಂದೇಶ ರವಾನಿಸುತ್ತದೆ. ಸಾಫ್ಟ್‌ವೇರ್ ಉದ್ಯೋಗಿಗಳು ಮನೆಯಲ್ಲಿಯೇ ಕುಳಿತುಕೊಂಡು ತಮ್ಮ ವೃತ್ತಿ ಮಾಡಬಹುದೆಂದು ಕೇಳಿದ್ದೆವು. ಈಗ ಯುದ್ಧ ಮಾಡಲು ಗಡಿಯಂಚಿಗೆ ತೆರಳಬೇಕಾಗಿಲ್ಲ. ಮನೆಯೊಳಗಿನಿಂದಲೇ ಕಂಪ್ಯೂಟರಿನ ಮುಂದೆ ಕುಳಿತು ಎದುರಾಳಿಯನ್ನು ನಾಶಮಾಡಬಹುದು. ಇಂತಹ ಯುಗದಲ್ಲಿಯೂ ಆಧುನಿಕ ಪರಿಕರಗಳನ್ನು ಬಳಸಿಕೊಂಡೇ ಮೌಢ್ಯವನ್ನು ಚಿರಸ್ಥಾಯಿಯಾಗಿಸುವ ಹುನ್ನಾರಗಳು ನಡೆಯುತ್ತಲೇ ಇವೆ. ಮೇಲಿನ ಉದಾಹರಣೆ ಒಬ್ಬ ಹೈಟೆಕ್ ಸ್ವಾಮಿಯ ಕುಚೋದ್ಯವಿರಬಹುದು ಎಂದೆನಿಸದಿರಲಿಲ್ಲ.

ಇತಿಹಾಸವನ್ನು ನೋಡಿದಾಗ ನಮಗೆ ತಿಳಿದುಬರುವುದೇನೆಂದರೆ ಜ್ಞಾನಿಗಳು, ಸಂತರು, ಅನುಭಾವಿಗಳು ಕಾಲಕಾಲಕ್ಕೆ ಸಮಾಜವನ್ನು ಸರಿದಾರಿಗೊಯ್ಯಲು ಯತ್ನಿಸುತ್ತಿದ್ದರು. ವಿಜ್ಞಾನಕ್ಕೆ ಸಹವರ್ತಿಯಾಗಿ ಅಧ್ಯಾತ್ಮವನ್ನು, ಭಕ್ತಿಯನ್ನು ಉಣಬಡಿಸುತ್ತಿದ್ದರು. ಅವರು ನೀಡುವ ನೀತಿ ಸಾರಗಳು ಕೊಂಚ ಉತ್ಪ್ರೇಕ್ಷೆ ಎನಿಸಿದರೂ ಸಮಾಜವನ್ನು ಎಚ್ಚರ ತಪ್ಪದಂತೆ ಮುನ್ನಡೆಸುತ್ತಿದ್ದವು. ವಚನಕಾರರಿಂದ ಹಿಡಿದು ದಾಸರು, ತತ್ವಪದಕಾರರವರೆಗೆ ಅವರನ್ನು ಹೆಸರಿಸಬಹುದು. ಈ ಹೊತ್ತಿನಲ್ಲಿ ಅಂಥವರ ಉಪಸ್ಥಿತಿ ನಿರ್ಲಕ್ಷ್ಯವಾಗಿದೆ. ಸಂತರ ವೇಷಧಾರಿಗಳಾಗಿ ಅಧ್ಯಾತ್ಮದ ಫಲಕಗಳನ್ನುಳ್ಳ ಆಶ್ರಮವಾಸಿಗಳನ್ನು ಕಾಣಬಹುದಾದರೂ ಅವರು ಯಾರೂ ನಿಷ್ಕಾಮ ಕರ್ಮಿಗಳಂತೆ, ಮೋಕ್ಷಮಾರ್ಗಿಗಳಾಗಿರುವಂತೆ ನಮಗೆ ಕಾಣಿಸುವುದಿಲ್ಲ. ಅವರೆಲ್ಲರೂ ವಿಜ್ಞಾನವನ್ನು, ತಂತ್ರಜ್ಞಾನವನ್ನು ಬಳಸಿಕೊಂಡು ಹಣ ಗಳಿಸಲು ಪೈಪೋಟಿ ನಡೆಸುತ್ತಿರುವವರು. ಓಬಿರಾಯನ ಕಾಲದ ಮೌಢ್ಯವನ್ನೇ ಹೊಸ ಪ್ಯಾಕೇಜಿನಲ್ಲಿ ಮಾಧ್ಯಮಗಳ ಮೂಲಕ ಬಾಗಿಲ ಸೇವೆ (door delivery) ಮಾಡುತ್ತಿರುವವರು. ಇವರೆ ದೇವಮಾನವರು, ಜ್ಯೋತಿಷಿಗಳು, ವಾಸ್ತುಪಂಡಿತರು, ಬಹುಬೇಡಿಕೆಯಲ್ಲಿರುವ ಸಮಾಜ ಚಿಕಿತ್ಸಕರು!

ನಿಜಗುಣ ಶಿವಯೋಗಿಗಳನ್ನು ಕುರಿತ ಹಲವಾರು ಪವಾಡ ಕಥೆಗಳಿವೆ. ಒಮ್ಮೆ ಅವರು ಮುಪ್ಪಿನ ಷಡಕ್ಷರಿಗಳ ಜೊತೆಗೂಡಿ ತಮ್ಮ ಗುರುಗಳನ್ನು ನೋಡಲು ಹೊರಟಿದ್ದರು. ಮಾರ್ಗಮಧ್ಯೆ ತೆಂಗಿನ ತೋಟವೊಂದು ಕಾಣಿಸಿತು. ತೋಟದ ಮಾಲೀಕನನ್ನು ಎರಡು ತೆಂಗಿನಕಾಯಿಗಳನ್ನು ಕೊಡುವಂತೆ ಕೇಳಿದರು. ಮಾಲೀಕ ಕಾಯಿ ಕೊಡಲು ನಿರಾಕರಿಸಿದ. ಹಾಗಾದರೆ ನಿನ್ನ ತೋಟದ ಕಾಯಿಗಳಲ್ಲಿ ಫಲ ಸಿಗುವುದಿಲ್ಲವೆಂದು ಹೇಳಿ ಮುಂದೆ ಸಾಗಿದರು. ಅವರನ್ನು ಅಪಹಾಸ್ಯ ಮಾಡಿದ ಮಾಲೀಕ ಪರೀಕ್ಷಿಸಲೆಂದು ಒಂದೆರಡು ಕಾಯಿಗಳನ್ನು ಒಡೆದು ನೋಡಿದ. ಒಳಗೆ ತಿರುಳಾಗಲೀ, ನೀರಾಗಲೀ ಇರಲಿಲ್ಲ. ಭಯಚಕಿತನಾದ ಅವನು ನಿಜಗುಣರಿದ್ದಲ್ಲಿಗೆ ಓಡಿಬಂದು ಬೇಕಾದಷ್ಟು ಕಾಯಿಗಳನ್ನು ತೆಗೆದುಕೊಳ್ಳುವಂತೆ ಬೇಡಿಕೊಂಡನು. ಅವರು ಭಕ್ತಿಯಿಂದ ಕೊಟ್ಟ ಎರಡು ಕಾಯಿಗಳನ್ನು ಮಾತ್ರ ಸ್ವೀಕರಿಸಿ ಮುಂದೆ ನಡೆದರು.

ಸಂಜೆ ತಮ್ಮ ಗುರುಗಳಾದ ಗುರುಲಿಂಗಸ್ವಾಮಿಗಳಿದ್ದಲ್ಲಿಗೆ ಬಂದು ತಮ್ಮಲ್ಲಿದ್ದ ತೆಂಗಿನಕಾಯಿಗಳನ್ನು ಅರ್ಪಿಸಿದರು. ಗುರುಗಳು ಕಾಯಿಗಳನ್ನು ಆಶೀರ್ವದಿಸಿ ಅವರಿಗೇ ಕೊಟ್ಟರು. ಮಾತನಾಡುತ್ತಿರುವಾಗಲೇ ನಿಜಗುಣರು ಗುರುಗಳಿತ್ತ ತೆಂಗಿನಕಾಯನ್ನು ಮೂಸಿನೋಡಿ ಹೊರಗೆಸೆದರು. ಆದರೆ ಮುಪ್ಪಿನ ಷಡಕ್ಷರಿಯವರು ಆಶೀರ್ವಾದ ರೂಪವಾಗಿ ಬಂದ ಫಲವನ್ನು ಪ್ರಸಾದವೆಂದು ಉಪಯೋಗಿಸಿದರು. ಮತ್ತೆ ಗುರುಸನ್ನಿಧಿಯಲ್ಲಿ ವಿಚಾರ ವಿನಿಮಯಕ್ಕೆ ಕುಂತಾಗ ಆಶೀರ್ವಾದದ ಫಲವನ್ನು ತಾತ್ಸಾರ ಮನೋಭಾವದಿಂದ ಎಸೆದುದಕ್ಕಾಗಿ ಆಕ್ಷೇಪವೆತ್ತಿದರು. ನಿಜಗುಣರು ತಾವು ಭಕ್ತಿಯಿಂದ ಪ್ರಸಾದ ಸ್ವೀಕಾರ ಮಾಡಿರುವುದಾಗಿ ಅರಿಕೆ ಮಾಡಿಕೊಂಡರೂ ಪರೀಕ್ಷೆ ನಡೆಯಿತು. ನಿಜಗುಣರು ಮೂಸಿ ಎಸೆದಿದ್ದ ಕಾಯನ್ನು ಒಡೆದು ನೋಡಿದಾಗ ಅದರಲ್ಲಿ ತಿರುಳೇ ಇರಲಿಲ್ಲ. ಷಡಕ್ಷರಿಗಳು ಈ ವರ್ತನೆ ಇಂದ್ರಜಾಲವಿದ್ಯೆಯೆಂದೂ, ಇದು ಶಿವಯೊಗಸಾಧನೆಯ ಅವಹೇಳನವೆಂದೂ ದೂರಿದರು. ನಿಜಗುಣರು ನಮ್ರವಾಗಿ ಉತ್ತರಿಸುತ್ತಾ ಇವು ಯೋಗಸಾಧನೆಯಿಂದ ಕೈಗೂಡುವ ಭೌತಿಕ ಫಲಗಳು. ಅರಿಯದವರು ಈ ಶಕ್ತಿಯನ್ನು ದುರುಪಯೋಗಪಡಿಸಿಕೊಂಡು ಲೋಕಕಂಟಕರಾಗುತ್ತಾರೆ. ಸಾಧನೆ ಸ್ವಾರ್ಥಕ್ಕಾಗಿ ಬಳಕೆಯಾದಾಗ ಅಪರಾಧವಾಗುತ್ತದೆ. ಬೋಧೆಯಿಂದ ಪ್ರಯೋಜನ ಪಡೆಯಲಾರದವರಿಗೆ ಯೋಗ ಸಾಧನೆಯ ಲೌಕಿಕ ಫಲದ ಅರಿವು ಮೂಡಿಸಿದಾಗ ಸನ್ಮಾರ್ಗ ದರ್ಶನವಾಗುತ್ತದೆ ಎಂದು ಹೇಳುತ್ತಾರೆ. ಯೋಗ ಪ್ರತಿಭೆಯೊಂದಿಗೆ ವಿಚಾರ ಶಕ್ತಿಯೂ ಬೆರೆತಾಗ ಸಾರ್ವತ್ರಿಕ ಒಳಿತಿಗೆ ಶ್ರಮಿಸುವ ವಿರಾಗಿಗಳು ದೊರಕುತ್ತಾರೆ ಎಂಬುದು ಈ ಕಥೆಯಿಂದ ವೇದ್ಯವಾಗುತ್ತದೆ.

ಹಾಗೇ ಹೆಜ್ಜೆಯಿಡುತ್ತಿದ್ದಂತೆ ಹಿರಿಯ ಮಹಿಳೆಯೊಬ್ಬರು ತಮ್ಮ ಎರಡೂ ಕೈ ಬೆರಳುಗಳನ್ನು ಒಂದರೊಳಗೊಂದು ಮಡಚಿ ಜಿಂಕೆಯಾಕೃತಿಯಲ್ಲಿ ಬಿಗಿ ಹಿಡಿದು ಮುದ್ರಾಹಸ್ತಿಕೆಯಾಗಿ ನಡೆಯುತ್ತಿದ್ದರು. ಇದು ಯಾವ ಶಾಸ್ತ್ರಜ್ಞನ ಕಟ್ಟಾಜ್ಞೆಯೊ, ಯಾವ ಕಾಯಿಲೆಗಾಗಿ ರಕ್ಷೆಯೊ ಎಂದು ತಲೆ ಕೆರೆದುಕೊಳ್ಳುತ್ತಾ ಹೊರಬಂದಿದ್ದಾಯಿತು.

■ ಮೂಚಿ

## ಮಾತೇ ಮುತ್ತು

★ ಪ್ರೇಮದ ಕೊರತೆಯಿಂದ ಮದುವೆಗಳು ಮುರಿದು ಬೀಳುವುದಿಲ್ಲ; ಸ್ನೇಹದ ಕೊರತೆಯಿಂದ ಮುರಿದುಬೀಳುತ್ತವೆ.

-ಫ್ರೆಡ್ರಿಕ್ ನೀಟ್ಷೆ

★ ಹಸಿವೆ ಮತ್ತು ಹೊಟ್ಟೆಯಲ್ಲಿ ಚಿಟ್ಟೆ ಹರಿದಾಡುವುದು. ಎಲ್ಲ ಸೃಜನಶೀಲ ವ್ಯಕ್ತಿಗಳಿಗೂ ಅತ್ಯಂತ ಮುಖ್ಯ.

-ಅಮಿತಾಭ್ ಬಚ್ಚನ್

★ ಸಾವಿನ ಭಯ ಜೀವಿಸುವ ಭಯದ ಹಿನ್ನೆಲೆಯಲ್ಲೇ ಹುಟ್ಟುತ್ತದೆ. ಪೂರ್ಣವಾಗಿ ಜೀವಿಸುವವನು ಯಾವ ಕ್ಷಣದಲ್ಲೂ ಸಾಯಲು ಸಿದ್ಧನಿರುತ್ತಾನೆ.

-ಮಾರ್ಕ್ ಟ್ವೇನ್

★ ನೂರನೋದಿ ನೂರ ಕೇಳಿ ಕೆತ್ತಿದರೇನು?
ಆಸೆ ಹರಿಯದು ರೋಷ ಬಿಡದು
ಮಜ್ಜನಕೆರೆದು ಫಲವೇನು?
ಮಾತಿನಂತೆ ಮನವಿಲ್ಲದ ಜಾತಿ
ಡೊಂಬರ ನೋಡಿ ನಗುವ ನಮ್ಮ
(ಕೂಡಲಸಂಗಮದೇವ)

- ಬಸವಣ್ಣ

★ ಜಗತ್ತಿನಲ್ಲಿ ಜೀವಿಸುವುದು ಅಪರೂಪದ ಸಂಗತಿ. ಬಹುತೇಕ ಜನರು ಅಸ್ತಿತ್ವದಲ್ಲಿ ಇರುತ್ತಾರೆ, ಅಷ್ಟೆ!

-ಆಸ್ಕರ್ ವೈಲ್ಡ್

★ ಒಂದು ಸಮುದಾಯದ ಪ್ರಗತಿಯನ್ನು ಅಳೆಯುವಾಗ, ಆ ಸಮುದಾಯದ ಸ್ತ್ರೀಯರ ಪ್ರಗತಿಯನ್ನು ಮೊದಲು ಅವಲೋಕಿಸಬೇಕು.

-ಡಾ.ಬಿ.ಆರ್.ಅಂಬೇಡ್ಕರ್

★ ನೀವು ಕಲ್ಪಿಸಿಕೊಳ್ಳುವ ಪ್ರತಿಯೊಂದೂ ವಾಸ್ತವವಾದದ್ದು!

-ಪಾಬ್ಲೋ ಪಿಕಾಸೊ

★ ಬದುಕು ಎನ್ನುವುದು ಬೈಸಿಕಲ್‌ನಂತೆ. ನಿಮ್ಮ ಸಮತೋಲನವನ್ನು ಉಳಿಸಿಕೊಳ್ಳಬೇಕೆಂದರೆ ಸೈಕಲ್ ತುಳಿಯುತ್ತಲೇ ಇರಬೇಕು.

-ಆಲ್ಬರ್ಟ್ ಐನ್‌ಸ್ಟೀನ್